# ಮಾ.5ಕ್ಕೆ ರಾಜ್ಯ ಬಜೆಟ್ ?

ಪ್ರಜಾವಾಣಿ ವಾರ್ತೆ 11-2-21

ಬೆಂಗಳೂರು: 2021-22ನೇ ಸಾಲಿನ ರಾಜ್ಯ ಬಜೆಟ್‌ಅನ್ನು ಮಾರ್ಚ್ 5ರಂದು ಮಂಡಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಅದಕ್ಕೂ ಮೊದಲು ಎರಡು ದಿನ, ಅಂದರೆ, ಮಾರ್ಚ್ 3 ಮತ್ತು 4ರಂದು ವಿಧಾನಮಂಡಲದ ಉಭಯ ಸದನಗಳಲ್ಲಿ 'ಒಂದು ದೇಶ- ಒಂದು ಚುನಾವಣೆ' ವಿಷಯದ ಕುರಿತು ಚರ್ಚೆ ನಡೆಸಲು ಉದ್ದೇಶಿಸಲಾಗಿದೆ. ಮಾರ್ಚ್ 8ರಿಂದ 31ರವರೆಗೆ ಬಜೆಟ್ ಮೇಲೆ ಇಲಾಖಾವಾರು ಚರ್ಚೆ ನಡೆಸಲು ತಾತ್ಕಾಲಿಕವಾಗಿ ದಿನ ನಿಗದಿಪಡಿಸಲಾಗಿದೆ' ಎಂದು ಸಂಸದೀಯ ವ್ಯವಹಾರಗಳ ಇಲಾಖೆ ಮೂಲಗಳು ತಿಳಿಸಿವೆ.

ಈಗಾಗಲೇ ಬಜೆಟ್ ಮಂಡನೆಗೆ ತಯಾರಿ ನಡೆಸುತ್ತಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿವಿಧ ಇಲಾಖೆಗಳ ಸಚಿವರು ಮತ್ತು ಅಧಿಕಾರಿಗಳ ಜತೆ ಪೂರ್ವಭಾವಿ ಸಭೆ ನಡೆಸುತ್ತಿದ್ದಾರೆ.